**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**
**ಸಿ.ಸಿ ನಂ. 792/2019**

| | | | |
|---|---|---|---|
| ಚಾಸಾ : | 3 | ಪ್ರಾಸಾ : | 3 |
| ಹೆಸರು | ಪುಟ್ಟಸ್ವಾಮಿ | | |
| ತಂದೆ/ಗಂಡನ ಹೆಸರು | ನಾಗರಾಜೇಗೌಡ | | |
| ವಯಸ್ಸು | 50 | | |
| ಉದ್ಯೋಗ | ವ್ಯವಸಾಯ | | |
| ವಿಳಾಸ | ಕೃಷ್ಣಯ್ಯನ ದೊಡ್ಡಿ ಗ್ರಾಮ | | |

**ದಿಃ 10.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-</u>**

ಆರೋಪಿತ ನನಗೆ ಪರಿಚಯ ಇಲ್ಲ. ಮೃತ ವ್ಯಕ್ತಿ ಮತ್ತು ಚಾಸಾ -1 ನನ್ನ ಅಣ್ಣ, ಚಾಸಾ- 2 , 4 ರಿಂದ 10 ರವರು ನನಗೆ ಪರಿಚಯ.

ಸಾಕ್ಷಿ ಒಂದು ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಎಂದು ಗುರುತಿಸಿದ್ದು ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು , ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ದಿಃ 30.06.2018 ರಂದು ಸಾತನೂರು ಠಾಣೆಯ ಪೊಲೀಸರು ಬೆಳಿಗ್ಗೆ 11.00 - 11.30 ಗಂಟೆ ವರೆಗೆ ನನ್ನ ಹಾಗೂ ಚಾಸಾ- 1 ಮತ್ತು 2 ರವರ ಸಮಕ್ಷಮ ನಿಪಿ-2

ರ ಪ್ರಕಾರ ಪಂಚನಾಮೆ ಮಾಡಿ ವಾಹನ ಸಂಃ ಕೆಎ-05-ಕೆಹೆಚ್-2407 ನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ.

ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

ಮರುವಿಚಾರಣೆ : ಇಲ್ಲ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

ಓ ಹೇ ಕೇ ಸರಿ ಇದೆ,

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ., ಕನಕಪುರ.